MR. SPEAKER.— The Hon. Minister will have to understand the question and then answer. There is no point in answering in a hurry. This is complicating. The hon. Members are exercising their mind and putting question.

(Question No. 102 (243): The hon. Member was absent).

Estimate for Kuduregundi Halla Project

250 SRI K.B. SHIVAIAH (Nanjangud).—Will the Minister of State for Major and Medium Irrigation be pleased to State:—

(a) whether it has come to the notice of Government that the estimates for Kuduregundi Halla Project in Nanjangud Taluk has been prepared;

(b) if so, the estimated cost of this project;

(c) when the Government propose to take up this works?

SRI B.B. CHIMMANAKATTI (Minister of State for Major and Medium Irrigation)—

(a) Yes
(b) Rs. 210 lakhs.
(c) It is under the consideration of Government.

ಶ್ರೀ ಕೆ.ಬಿ. ಶಿವಯ್ಯ.—೨೧೦ ಲಕ್ಷ ರೂಪಾಯಿಗಳ ಅಂದಾಜು ಯಾವ ವರ್ಷ ತಯಾರಾಯಿತು ? ಮತ್ತು ಈಗ ಅದು ಏನಾಗಿದೆ ? "ಇದು ಸರ್ಕಾರದ ಪರಿಶೀಲನೆಯಲ್ಲಿ ಇದೆ" ಎಂದು ಸಚಿವರು ಉತ್ತರ ನೀಡಿದ್ದಾರೆ. ಆಂದರೆ, ಕೆಲಸ ಪ್ರಾರಂಭ ಮಾಡುವುದು ಪರಿಶೀಲನೆಯಲ್ಲಿದೆಯೇ ಅಥವಾ ಪ್ರಾರಂಭ ಮಾಡಬಾರದೆನ್ನುವ ವಿಷಯ ಪರಿಶೀಲನೆಯಲ್ಲಿ ಇದೆಯೇ ಅಥವಾ ಹಣದ ಮತ್ತು ತಾಂತ್ರಿಕ ಅಭಾವದ ವಿಷಯ ಪರಿಶೀಲನೆಯಲ್ಲಿ ಇದೆಯೇ ? ಎಂಬುದನ್ನು ಮಾನ್ಯ ಸಚಿವರು ತಿಳಿಸುವರೆ?

† ಶ್ರೀ ಬಿ.ಬಿ. ಚಿಮ್ಮನಕಟ್ಟಿ.—೧೯೭೬-೭೭ನೇ ಸಾಲಿನಲ್ಲಿ ಸುಮಾರು ೨೧೦ ಲಕ್ಷ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸಲಾಗಿತ್ತು. ನಂತರ ಈ ಯೋಜನೆಯನ್ನು Central Water Commissionಗೆ ಕಳುಹಿಸಿಕೊಟ್ಟಾದ ಮೇಲೆ ಇದರ ಅಚ್ಚುಕಟ್ಟು ಪ್ರದೇಶ ೫೧೦೦ ಎಕರೆ ಇದುದರಿಂದ ಇವನ್ನು ಸಣ್ಣ ನೀರಾವರಿ ಯೋಜನೆಗಳ ಅಡಿಯಲ್ಲಿ ಅಳವಡಿಸಬೇಕೆಂದು ಹಣಕಾಸು ಆಯೋಗದ ಸಂತ್ರೋಲೆ ಬಂದಿರುವುದರಿಂದ, ಇದನ್ನು ಚಿಕ್ಕ ನೀರಾವರಿ ಯೋಜನೆಯನ್ನಾಗಿ ತೆಗೆದುಕೊಳ್ಳುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಈಗ ಕರ್ನಾಟಕ ರಾಜ್ಯಕ್ಕೆ ೬೫ ಕೋಟಿ ರೂಪಾಯಿಗಳ ವಿಶ್ವಬ್ಯಾಂಕಿನ ನೆರವು ಸಿಕ್ಕಿರುವುದರಿಂದ ಮತ್ತು ಈ ಯೋಜನೆ ವಿಶ್ವಬ್ಯಾಂಕಿನ ನೆರವಿನಲ್ಲಿ ತೆಗೆದುಕೊಳ್ಳುವ ಯೋಜನೆಗಳಲ್ಲಿ ಸೇರಿರುವುದರಿಂದ, ಇದರ ಬಗ್ಗೆ ಒಂದು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯವರು ಈ ಯೋಜನೆಯ feasibilityಯನ್ನು ಪರಿಶೀಲನೆ ಮಾಡಿದ ನಂತರ ಇದನ್ನು ಕಾರ್ಯಗತಗೊಳಿಸಬೇಕೆಂದು ಸರ್ಕಾರದ ಉದ್ದೇಶವಿದೆ.

ಶ್ರೀ ಕೆ.ಬಿ. ಶಿವಯ್ಯ.—ಸಂಜನಗೂಡು ತಾಲ್ಲೂಕು ಹಿಂದುಳಿದ ತಾಲ್ಲೂಕು, ಅದರಲ್ಲಿಯೂ ಆದಿವಾಸಿಗಳು ಹರಿಜನ ಗಿರಿಜನರು ಬರತಕ್ಕ ಪ್ರದೇಶವಾಗಿದ್ದು, ಇವರೆಲ್ಲರೂ ಸಣ್ಣ ಸಣ್ಣ ಹಿಡುವಳಿದಾರರಾಗಿದ್ದಾರೆ. ಇದು ಜೀವನದಿಯಾಗಿದ್ದು, ಇಲ್ಲಿ ಒಂದು ಪ್ರಾಜೆಕ್ಟ್ ಬಹಳ ಉಪಯುಕ್ತವಾಗಿ ಕಂಡುಬರುವುದರಿಂದ ಈ ಯೋಜನೆಯ ಕೆಲಸಕಾರ್ಯಗಳನ್ನು ಮುಂದಿನ ಆಯವ್ಯಯ ವರ್ಷದಿಂದ ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸ್ವಾಮಿ, ನಾನು ಈಗಾಗಲೇ ಹೇಳಿದ್ದೇನೆ. ಇದಕ್ಕೆ ವಿಶ್ವಬ್ಯಾಂಕಿನ ನೆರವು ಸಿಕ್ಕಿದೆ. ಅಂತರಾಷ್ಟ್ರೀಯ ಸ್ಕೀಮಿನವರು ಇದು ಎಷ್ಟರಮಟ್ಟಿಗೆ ಫೀಸಿಬಿಲಿಟಿ ಇದೆ ಎಂಬುದನ್ನು ತೀರ್ಮಾನಿಸಿದ ಮೇಲೆ ಅದನ್ನು ಕಾರ್ಯಗತ ಮಾಡಬೇಕು. ಪಂಳೆಯ ಸಾಂದ್ರತೆಯನ್ನು ಕೂಡ ನೋಡಬೇಕಾಗುತ್ತದೆ. ಈ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ಏನೂ ಅಡ್ಡಿ ಇಲ್ಲ.

ಶ್ರೀ ಕೆ.ಬಿ. ಪುಲ್ಲಪ್ಪ.—ಫೀಸಿಬಿಲಿಟಿ ಸಾಧ್ಯವೋ ಅಸಾಧ್ಯವೋ ಎಂದು ನೋಡದೆ ೨೧೦ ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆಯೇ ಸ್ವಾಮಿ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಮ್ಮ ಸರ್ಕಾರ ಈ ಯೋಜನೆಯನ್ನು ಸಣ್ಣ ನೀರಾವರಿ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿತ್ತು. ಇದಕ್ಕೆ ಈಗ ವಿಶ್ವಬ್ಯಾಂಕಿನ ನೆರವು ಸಿಕ್ಕಿದೆ. ಇದನ್ನು ಈಗ ಅಂತರಾಷ್ಟ್ರೀಯ ಸಮಿತಿಯವರು ಪರಿಶೀಲನೆ ಮಾಡಬೇಕಾಗಿದೆ. ಅವರು ಪರಿಶೀಲನೆ ಮಾಡಿ ತೀರ್ಮಾನ ಮಾಡಿದಮೇಲೆ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಬಿ. ಶಿವಯ್ಯ.—ಫೀಸಿಬಿಲಿಟಿ ಪರೀಕ್ಷೆ ಯಾವಾಗ ಮುಗಿಯುತ್ತೆ ? ಇದರ ಬಗ್ಗೆ ಸರ್ಕಾರ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಆದಷ್ಟುಬೇಗ ಪರಿಶೀಲನೆ ಮಾಡಿ ಈ ಯೋಜನೆಯನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಆರ್. ರಾಜುಗೌಡ.—ಸಣ್ಣ ನೀರಾವರಿ ಯೋಜನೆ ಇಲಾಖೆಯ ನಿಯಮಗಳಿಗೂ ವಿಶ್ವ ಬ್ಯಾಂಕಿನ ನಿಯಮಗಳಿಗೂ ವ್ಯತ್ಯಾಸ ಏನು ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವಿಶ್ವಬ್ಯಾಂಕ್ ನೆರವುಕೊಡುವುದರಿಂದ, ಈ ಯೋಜನೆ ಎಷ್ಟರಮಟ್ಟಿಗೆ ಲಾಭವಾಗುತ್ತದೆ? ಮಳೆಯ ಸಾಂದ್ರತೆ ಏನು ಎಲ್ಲವನ್ನು ನೋಡುತ್ತಾರೆ.

ಅಧ್ಯಕ್ಷರು.—ವಿಶ್ವ ಬ್ಯಾಂಕಿನ ನಿಯಮಗಳೇನು ? ನಿಮ್ಮ ಇಲಾಖೆಯ ನಿಯಮಗಳೇನು ? ಅಂತ ಕೇಳುತ್ತಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನನಗೆ ಸ್ವಲ್ಪ ಕಾಲಾವಕಾಶ ಬೇಕು.

Budget amount allotted to the Forest Department in Bellary District.

260 SRI M. RAMAPPA (Kurugodu).—Will the Minister for Forest and Mines and Geology be pleased to state:—

(a) the Budget amount allotted to the Forest Department to grow forest in Bellary District during the last 3 years.

(b) number of trees planted during the last 3 years in the District and the No. of trees survived.

(c) the amount utilised for the above purpose and the amount unspent for the last 3 years?

SRI G. MADEGOWDA (Minister for Forest and Mines and Geology).

(a) Budget allotted to Bellary District.—

a 1977-78 Rs. 18,05,000-00
b 1978-79 Rs. 23,32,000-00
c 1979-80 Rs. 28,24,000-00

(b) Trees planted		Trees survived
1977-78	28,17,895 nos	18,31,631 nos
1978-79	6,85,875 nos	5,14,406 nos
1979-80	20,72,545 nos	16,58,036 nos